



ಅರಸೊತ್ತಿಗೆಯನ್ನು ಅವರು ಕೇವಲ ಮನುಷ್ಯರು, ಸಾಯುವವರು, ಕೆಡುವವರು ಎಂದು ತಳ್ಳಿಹಾಕಲು ಏನೂ ಕಾರಣವಿತ್ತೋ ಏನೋ? ಇದು ಸ್ವಾನುಭವವೇ ಇರಬೇಕು. ಇದೇ ದೀಕ್ಷೆಯನ್ನು ಶಿಷ್ಯ ರಾಘವಾಂಕನಿಗೂ ಕೊಟ್ಟು, ಆ ಶಿಷ್ಯ ಮತ್ತೆ ರಾಜನೊಬ್ಬನ ಮೇಲೆಯೇ ಕಾವ್ಯ ರಚಿಸಿದ ಸಂಗತಿ ಕರ್ಣಪಟಲಕ್ಕೆ ಬೀಳುತ್ತಿದ್ದಂತೆಯೇ ಕಪಾಳಕ್ಕೆ ಹೊಡೆದು ಹಲ್ಲು ಉದುರಿಸುತ್ತಾನಲ್ಲ! ಈ ಏಟು ಅರಸೊತ್ತಿಗೆ ಮತ್ತು ಅಲ್ಲಿಯ ಕವಿಗಳ ವಿರುದ್ಧವೇ ಇದ್ದಿರಬಹುದು! ಕವಿ-ಲೇಖಕರಾದವರು ರಾಜ (ಕಾರಣ) ಪಾರಮ್ಯವನ್ನು ಹೊಗಳಿಕೊಳ್ಳುತ್ತಾ ಕೂರಬೇಕಿಲ್ಲ ಎಂಬ ಯಾವೊತ್ತಿನ ಆಶಯವನ್ನು ಎತ್ತಿ ಹಿಡಿದ ಹರಿಹರನೇ ಕನ್ನಡದ ಮೊದಲ ಬಂಡಾಯ ಕವಿ. ಅದಲ್ಲದೆ, ಅದೆಷ್ಟು ಜನರ ವಿರೋಧದ ನಡುವೆಯೇ ರಾಜನೊಬ್ಬನನ್ನು, ಶಿವನನ್ನು ದಲಿತನ ಮನೆಯ ಮುಂದೆ ನಿಲ್ಲಿಸಿದ ಅದ್ಭುತ ಪ್ರಸಂಗವನ್ನು ಹರಿಹರ ಸೃಷ್ಟಿಸಿಬಿಟ್ಟ!

ತನ್ನ ಗುರುವಿನ ಆಶಯಕ್ಕೆ ಸಂವಾದಿಯಾದ ಪ್ರಸಂಗವನ್ನೇ ರಾಘವಾಂಕ 'ಹರಿಶ್ಚಂದ್ರ ಕಾವ್ಯ'ದಲ್ಲಿ ಸೃಷ್ಟಿಸಿರುವುದನ್ನು ಗಮನಿಸಬೇಕು. ವೀರಬಾಹುಕ ಎನಿಸಿದ ಯಮಧರ್ಮರಾಯನೂ, ವಿಶ್ವಾಮಿತ್ರನೂ, ವಸಿಷ್ಠನೂ, ಶಿವಪಾರ್ವತಿಯರೂ ಸ್ಮಶಾನಕ್ಕೆ ಬಂದು ಹರಿಶ್ಚಂದ್ರನ ಮುಂದೆ ನಿಲ್ಲುತ್ತಾರೆ, ಇದು ಸತ್ಯದ ಶಕ್ತಿ. ಅಧಿಕಾರ ತ್ಯಾಗ, ಅಹಂಕಾರ ನಿರಶನ, ಕಳೆದುಕೊಂಡ ಬಂಧು ಮೋಹ, ಕಾಯಕ ಸ್ಥಳದ ನಿಷ್ಠೆ, ಇದೆಲ್ಲವನ್ನೂ ರಾಘವಾಂಕ ಏಕಕಾಲಕ್ಕೆ ಕಾಣಿಸಿ, ಅಲ್ಲಿ ಸತ್ಯದ ಘನತೆಯನ್ನು ಸಂಸ್ಥಾಪಿಸಿಬಿಡುತ್ತಾನೆ. ಇದರೊಂದಿಗೆ ಹರಿಶ್ಚಂದ್ರ ಕಾವ್ಯದಲ್ಲಿ ಅಲ್ಲಲ್ಲಿ ಬರುವ ತೀರ ಸಣ್ಣಸಣ್ಣ ವಿವರಗಳನ್ನೂ ಗಮನಿಸಿದರೆ ಅವು ಯಾವ ಕಾಲಕ್ಕೂ ದೊಡ್ಡ ಸಂಗತಿಗಳಾಗಿಯೇ ತೋರುತ್ತವೆ. ರೈತರು ತಮ್ಮ ಬೆಳೆಗಳ ಸಂಕಷ್ಟ ಹೇಳಿಕೊಳ್ಳಲು ಬಂದಾಗ್ಗೆ ಅವರಿಗೆ ಹರಿಶ್ಚಂದ್ರ ಮಂತ್ರಾಕ್ಷತೆಯ ಗೌರವ ತೋರಿಸಿ, ಸ್ವಾಗತಿಸಿದನಂತೆ! ಇಂಥವು ಆ ಕಾವ್ಯದಲ್ಲಿ ಅದೆಷ್ಟೋ.

'ದೈವವೆಂದರೆ ಅದು ಸತ್ಯ, ಅಧ್ಯಾತ್ಮ ಎಂಬುದು ನಿಷ್ಠೆಯ ನಡೆ' ಎಂಬುದು ಕಾವ್ಯದ ಬಹುಮುಖ್ಯ ಜನಮುಖಿ ಆಶಯ. ಕಳೆದ ದಶಕಗಳಲ್ಲಿ ಕುಮಾರ ವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ', ಲಕ್ಷ್ಮೀಶನ 'ಜೈಮಿನಿ ಭಾರತ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ' –ಇವು ಜನ ಬದುಕಿನ ನೈತಿಕಪಠ್ಯಗಳಾಗಿದ್ದವು. ಜೋಳದರಾಶಿ ದೊಡ್ಡನಗೌಡರು ಬೆಂಗಳೂರು ಸಾಹಿತ್ಯ ಸಮ್ಮೇಳನವೊಂದರಲ್ಲಿ (1973) 'ಹರಿಶ್ಚಂದ್ರ ಕಾವ್ಯ'ದ ಕೆಲವು ಷಟ್ಪದಿಗಳನ್ನು ಸಾವಿರಾರು ಪ್ರೇಕ್ಷಕರು ಮತ್ತು ವೇದಿಕೆಯಲ್ಲಿದ್ದ ದ.ರಾ. ಬೇಂದ್ರೆಯವರ ಮುಂದೆ ಓದಿ ಎಲ್ಲರ ತಲೆದೂಗಿಸಿಬಿಟ್ಟರು.

* * *

ಹಾರ್ವರ್ಡ್ ವಿ.ವಿ.ಯ ಆ ಪುಸ್ತಕ ಮಳಿಗೆಯಲ್ಲಿ 'ಹರಿಶ್ಚಂದ್ರ ಕಾವ್ಯ' ಪ್ರತಿಯನ್ನು ತೆರೆದುನೋಡಿದೆ. ಎಡಭಾಗದಲ್ಲಿ ಪದ್ಯಗಳು ಕನ್ನಡದಲ್ಲಿ, ಬಲಭಾಗದಲ್ಲಿ ಅದೇ ಪದ್ಯದ ಇಂಗ್ಲಿಷ್ ಭಾಷಾಂತರ. ಕೃತಿಯ ಕೊನೆಯ ಪದ್ಯದ ಕೊನೆಯ ವಾಕ್ಯದ ಕೊನೆಯ ಪದ ನೋಡಿದೆ, 'ಪೇಳ್ದನನಪೇಕ್ಷೆಯಿಂದ ಕವಿ ರಾಘವಾಂಕಂ'... 'ಮಹಾಲಿಂಗ ಭಕ್ತರ ಭಕ್ತನ್' ಎಂತಲೇ ಇತ್ತು. ರಾಘವಾಂಕನ ವಿನಯ ಎಂಥದ್ದು ಎಂದರೆ ಆತ ಹಂಪೆಯ ವಿರೂಪಾಕ್ಷನ ನೇರ ಭಕ್ತನಲ್ಲ, ಭಕ್ತರ ಭಕ್ತ! ಇದು ನಮ್ಮ ಕನ್ನಡ ಕವಿ ಪರಂಪರೆ! ಹಾಗೆಯೇ ಈ